MA.3/25

ಮೇಲ್ಮನವಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ.151ರ ಅಡಿಯಲ್ಲಿ ಅರ್ಜಿ, ಪ್ರಮಾಣಪತ್ರ ಸಲ್ಲಿಸಿ ಮಾನ್ಯ ನ್ಯಾಯಾಲಯವು 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ, ದಾವಣಗೆರೆ, ಅಸಲು ದಾವಾ ನಂ.339/2023, ದಿ.01-03-2025 ರಂದು ನೀಡಿದಂತಹ ತೀರ್ಪು ಡಿಕ್ರಿಯನ್ನು ತಡೆಹಿಡಿಯಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಅರ್ಜಿ, ಪ್ರಮಾಣಪತ್ರ, ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪು ಡಿಕ್ರಿಯನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪು ಡಿಕ್ರಿಯನ್ನು ತಡೆಹಿಡಿಯಲು ಮೇಲ್ನೋಟಕ್ಕೆ ಈ ಹಂತದಲ್ಲಿ ಯಾವುದೇ ಸಕಾರಣಗಳು ಇರುವುದಿಲ್ಲ.

ಮೇಲ್ಮನವಿದಾರರ ಪರ ವಕೀಲರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು - ನಾಗಣ್ಣ, ಮೃತರ ವಾರಸುದಾರರು -ವಿರುದ್ಧ- ಸಿದ್ಧರಾಮೇಗೌಡ, ಮೃತರ ವಾರಸುದಾರರು ತೀರ್ಪನ್ನು ಹಾಜರುಪಡಿಸಿದ್ದು, ಸದರಿ

ತೀರ್ಪನ್ನು ಪರಿಶೀಲಿಸಲಾಗಿ - ತೀರ್ಪು ಡಿಕ್ರಿಯನ್ನು ತಡೆಹಿಡಿಯುವುದಕ್ಕೆ ಸಂಬಂಧಪಟ್ಟಂತೆ ನೀಡಿದ ತೀರ್ಪು ಆಗಿರುವುದಿಲ್ಲ, ಸದರಿ ತೀರ್ಪನ್ನು ಮೇಲ್ಮನವಿ ಇತ್ಯರ್ಥ ಮಾಡುವ ಸಮಯದಲ್ಲಿ ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಈ ಕೆಳಗಿನಂತೆ

**ಆದೇಶ**

ಎದುರುದಾರರಿಗೆ ಮಧ್ಯಂತರ ಅರ್ಜಿ-1ರ ನೋಟೀಸು ಮತ್ತು ಮೇಲ್ಮನವಿಯ ನೋಟೀಸನ್ನು ಕಳುಹಿಸಲು ಆದೇಶಿಸಲಾಯಿತು.

ಮುಂದಿನ ದಿನಾಂಕ .03-06-2025

SD/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.